# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.14/ಪಿಆರ್: 28 :2021-22

ದಿನಾಂಕ: 18.12.2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಾಸರಹಳ್ಳಿ ವಲಯ ಬಾಗಲುಗುಂಟೆ ವಾರ್ಡ್-14 ರಲ್ಲಿ ದಿನಾಮಕ: 18.12.2021 ರಂದು ನಡೆದ ವಾರ್ಡ್ ಸಭೆಯ ನಡವಳಿಗಳು:-**

**ಸಭೆಗೆ ಹಾಜರಾಗಿದ್ದವರ ವಿವರಗಳು:-**

| ಕ್ರಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಕೆ. ಮರುಳಸಿದ್ದಪ್ಪ | ಕಾರ್ಯಪಾಲಕ ಅಭಿಯಂತರರು, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ. ವೆಂಕಟೇಶಪ್ಪ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ನಂ.14, ಬಾಗಲಗುಂಟೆ |
| 3 | ಶ್ರೀ.ಶಿವಲಿಂಗೇಗೌಡ | ತೋಟಗಾರಿಕೆ ವಿಭಾಗ, ದಾಸರಹಳ್ಳಿ ವಲಯ |
| 4 | ಶ್ರೀ. ಮೋಹನ್ ಗೌರೋಜಿ | ಹಿರಿಯ ಆರೋಗ್ಯ ನಿರೀಕ್ಷಕರು |
| 5 | ಚೈತ್ರ ಎಂ | ಕಿರಿಯ ಆರೋಗ್ಯ ನಿರೀಕ್ಷಕರು |
| 6 | ಶ್ರೀ. ಮಂಜುನಾಥ್. ಡಿ | ವಾಟರ್ ಇನ್ಸ್‌ಪೆಕ್ಟರ್ |
| 7 | ಶ್ರೀ. ರವಿಕುಮಾರ್ | ವಾಟರ್ ಇನ್ಸ್‌ಪೆಕ್ಟರ್ |
| 8 | ಶ್ರೀ.ಬಿ.ಟಿ. ಲಕ್ಷ್ಮಿ ವೆಂಕಟೇಶ್ | ಮುನಿಕೊಂಡಪ್ಪ ಬಡಾವಣೆ, ನಾಗರೀಕ ಕ್ಷೇಮಾಭಿವೃದ್ಧಿ ಸಂಘ |
| 9 | ಶ್ರೀ. ಕೃಷ್ಣಮೂರ್ತಿ | ಡಿಫೆನ್ಸ್ ಕಾಲೋನಿ, ನಾಗರೀಕ ಕ್ಷೇಮಾಭಿವೃದ್ಧಿ ಸಂಘ |
| 10 | ಶ್ರೀ. ಸದಾಶಿವ | ನಾಗರೀಕ ಹಿತ ರಕ್ಷಣಾ ಸಮಿತಿ, ಎಂ.ಇ.ಐ ಬಡಾವಣೆ |
| 11 | ಶ್ರೀ. ರಾಮಪ್ರಸಾದ | ನಾಗರೀಕ ಹಿತ ರಕ್ಷಣಾ ಸಮಿತಿ, ಸೀಡೆದಹಳ್ಳಿ |
| 12 | ಶ್ರೀ. ವೆಂಕಟರಮಣ ಹೊಳ್ಳ | ನಾಗರೀಕ ಹಿತ ರಕ್ಷಣಾ ಸಮಿತಿ, ರಾಯಲ್‌ಎನ್‌ಕ್ಲೇವ್/ಸಿಡೆದಳ್ಳಿ |
| 13 | ಶ್ರೀ. ರಮೇಶ್ | ಕುಸುಮ ಎಲೆಕ್ಟ್ರಿಕಲ್ಸ್ |
| 14. | ಶ್ರೀಮತಿ. ಶೋಭ | ಪ್ರಾಥಮಿಕ ಆರೋಗ್ಯ ಕೇಂದ್ರ ಬಾಗಲುಗುಂಟೆ |
| 15 | ಶ್ರೀಮತಿ. ಮಾಲಾ | ಪ್ರಾಥಮಿಕ ಆರೋಗ್ಯ ಕೇಂದ್ರ ಬಾಗಲುಗುಂಟೆ |

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು, ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಈ ಹಿಂದಿನ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ, ಬಾಕಿ ಇರುವ ಕುಂದು ಕೊರತೆಗಳನ್ನು ಆದ್ಯತೆಯ ಮೇಲೆ ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.



Scanned with CamScanner

## ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಪಟ್ಟ ವಿಷಯದ ಬಗ್ಗೆ.



ಬಾಗಲಗುಂಟೆ ವಾರ್ಡ್ ವ್ಯಾಪ್ತಿಯಲ್ಲಿನ 110 ಹಳ್ಳಿಗಳ ಪಟ್ಟಿಯಲ್ಲಿರುವ ಸಿಡೇದಹಳ್ಳಿ ಮತ್ತು ಚಿಕ್ಕಸಂದ್ರ ಭಾಗಕ್ಕೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸಿರುವುದರಿಂದ ಮುನಿಕೊಂಡಪ್ಪ ಬಡಾವಣೆ, ಡಿಫೆನ್ಸ್ ಕಾಲೋನಿ ಪ್ರದೇಶಗಳಿಗೆ ಅಗತ್ಯ ಪ್ರಮಾಣದಲ್ಲಿ ನೀರು ಸರಬರಾಜು ಆಗದೇ ಇರುವ ಬಗ್ಗೆ ವಾರ್ಡ್ ಸಮಿತಿ ಸದಸ್ಯರು ಸಭೆಯ ಗಮನಕ್ಕೆ ತಂದರು ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಸದರಿ ವಿಷಯದ ಕುರಿತು ಅಗತ್ಯ ಕ್ರಮ ವಹಿಸಲು ಮೇಲಾಧಿಕಾರಿಗಳ ಗಮನಕ್ಕೆ ತರುವಂತೆ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಪ್ರತಿನಿಧಿಗಳಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು/ಸ.ಕಾ.ನಿ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ

- **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಂಬಂಧಿಸಿದಂತೆ, ಆರೋಗ್ಯ ಪರಿವೀಕ್ಷಕರು ಈ ಕೆಳಕಂಡಂತೆ ಮಾಹಿತಿ ಒದಗಿಸಿದರು.

| | |
|---|---|
| ಒಟ್ಟು ಪ್ರಕರಣಗಳು | 7363 |
| ಬಿಡುಗಡೆಯಾದ ಪ್ರಕರಣಗಳು | 7201 |
| ಸಕ್ರಿಯ ಪ್ರಕರಣಗಳು | 06 |
| ಮರಣ | 156 ಇರುತ್ತದೆಂದು ಸಭೆಯಲ್ಲಿ ತಿಳಿಸಿದರು. |

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ, ಲಸಿಕಾ ಕಾರ್ಯಕ್ರಮವನ್ನು ಮಾಲ್ ಗಳು , ಅಪಾರ್ಟ್‌ಮೆಂಟ್‌ಗಳು ಹಾಗೂ ಹೆಚ್ಚಿನ ಜನಸಂದಣಿ ಇರುವ ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಕೈಗೊಳ್ಳುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು. ವಾರ್ಡ್ ಸಮಿತಿ ಸದಸ್ಯರು ಈ ಕುರಿತು ಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಕ್ರಮ: ಕೋವಿಡ್ ಆರೋಗ್ಯ ವೈಧ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು

- **ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಅಸಮರ್ಪಕವಾಗಿರುವ ಬಗ್ಗೆ ವಾರ್ಡ್ ಸಮಿತಿ ಸದಸ್ಯರು ತಮ್ಮ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ವ್ಯಾಪ್ತಿಯಲ್ಲಿ ಪರಿಣಾಮಕಾರಿಯಾಗಿ ಘನತ್ಯಾಜ್ಯ ವಿಲೇವಾರಿಯನ್ನು ಸಿಪಿಪಿ ಮಾದರಿಯಲ್ಲಿ ಕೈಗೊಳ್ಳಲು ಕ್ರಮ ವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು.

ಕ್ರಮ:ಸ.ಕಾ.ನಿ.ಅ (ಘ.ತ್ಯಾ.ನಿ)/ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರು

- **ತೋಟಗಾರಿಕೆ:**

ಬಾಗಲಗುಂಟೆ ವಾರ್ಡ್ ವ್ಯಾಪ್ತಿಯಲ್ಲಿನ ಉದ್ಯಾನವನಗಳಲ್ಲಿ ಶೌಚಾಲಯಗಳು ಇಲ್ಲದೇ ಇರುವ ಬಗ್ಗೆ ವಾರ್ಡ್ ಸಮಿತಿ ಸದಸ್ಯರು ಸಭೆಯ ಗಮನಕ್ಕೆ ತಂದರು ಈ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಉದ್ಯಾನವನಗಳಲ್ಲಿ ಅಗತ್ಯ ಅಭಿವೃದ್ಧಿ/ ದುರಸ್ಥಿ ಕಾಮಗಾರಿ / ಶೌಚಾಲಯಗಳನ್ನು ನಿರ್ಮಿಸಲು ಕೈಗೊಳ್ಳಲು ಟೆಂಡರ್ ಕರೆಯಲಾಗಿದೆ ಎಂದು ತೋಟಗಾರಿಕೆ ವಿಭಾಗದ ಪ್ರತಿನಿಧಿಗಳು ಸಭೆಯಲ್ಲಿ ತಿಳಿಸಿದರು.

ಕ್ರಮ: ಕಾ.ಪಾ.ಅ (ಯೋಜನೆ-ದಾ.ವ)/ ತೋಟಗಾರಿಕೆ ಅಧೀಕ್ಷಕರು, ದಾಸರಹಳ್ಳಿ ವಲಯ

2/3

Scanned with CamScanner

* .ವಾರ್ಡ್ ೯ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣದ ಬಗ್ಗೆ
  ವಾರ್ಡ್ ಸಮಿತಿ ಸದಸ್ಯರು ಮಾತನಾಡಿ ಡಿಫೆನ್ಸ್ ಕಾಲೋನಿ, ಈಶ್ವರ ದೇವಸ್ಥಾನದ ಹತ್ತಿರ 20ನೇ ಅಡ್ಡರಸೆಯಲ್ಲಿ ಅನಧಿಕೃತ ಕಟ್ಟಡ ನಿರ್ಮಿಸುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ಪರಿಶೀಲಿಸಿ ಸೂಕ್ತ ಕ್ರಮ ವಹಿಸಲು ತಿಳಿಸಲಾಯಿತು.

ಕ್ರಮ:ಸ.ಅ ವಾ.14/ ಸ.ಕಾ.ನಿ.ಅ (ದಾಸರಹಳ್ಳಿ ಉಪ–ವಿಭಾಗ)

* ಇತರೆ ವಿಷಯಗಳ ಬಗ್ಗೆ
  ಬೆಂಗಳೂರು ನಗರದಲ್ಲಿ ಇತ್ತೀಚೆಗೆ ವ್ಯಾಪಕವಾಗಿ ಮಳೆಯಾಗುತ್ತಿದ್ದು, ಬಹುತೇಕ ರಸ್ತೆಗಳಲ್ಲಿ ರಸ್ತೆಗುಂಡಿಗಳು ಉಂಟಾಗಿರುವ ಬಗ್ಗೆ, ಮಳೆನೀರು ಚರಂಡಿಗಳಲ್ಲಿ ಹೂಳು ತುಂಬಿರುವ ಬಗ್ಗೆ ಚರ್ಚಿಸಲಾಯಿತು. ವಾರ್ಡ್ ಅಭಿಯಂತರರು ಮಾತನಾಡಿ ಗುಂಡಿ ಮುಚ್ಚುವ/ ಡಾಂಬರೀಕರಣ ಕಾಮಗಾರಿಯನ್ನು ದಿನಾಂಕ: 20.12.2021 ರಂದು ಪ್ರಾರಂಭಿಸುವುದಾಗಿ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕಲ್ವರ್ಟ್‌ಗಳ ನಿರ್ಮಾಣ ಕಾಮಗಾರಿಯನ್ನು ಆಧ್ಯತೆ ಮೇಲೆ ಪ್ರಾರಂಭಿಸುವುದಾಗಿ ತಿಳಿಸಿದರು.

ಕ್ರಮ:ಸ.ಅ ವಾ.14/ ಸ.ಕಾ.ನಿ.ಅ (ದಾಸರಹಳ್ಳಿ ಉಪ–ವಿಭಾಗ)

18/12/2021

ಸಹಾಯಕ ಅಭಿಯಂತರರು
ಹಾಗೂ ಸದಸ್ಯ ಕಾರ್ಯದರ್ಶಿ ವಾರ್ಡ್ ಸಮಿತಿ

17/12/2021

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.14, ಬಾಗಲಗುಂಟೆ
ಮತ್ತು ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಅಧಿಕಾರಿಗಳ ಮಾಹಿತಿಗಾಗಿ:–</u>

1) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಆರೋಗ್ಯ ವೈಧ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
8) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ.
11) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 14 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಕಲ್ಯಾಣಾಧಿಕಾರಿಗಳು (ದಾವ) ಬಿಬಿಎಂಪಿ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13) ಕಛೇರಿ ಪ್ರತಿ.

Scanned with CamScanner